ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : ಪ ಪ್ರ : 2014–15 : ಡಿಸೆಂಬರ್ 24, 2014

# ಕ್ರಿಸ್‌ಮಸ್ ಹಬ್ಬ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ



ಬೆಂಗಳೂರು, ಡಿಸೆಂಬರ್ 24 :

ಶಾಂತಿಧೂತ ಏಸುಕ್ರಿಸ್ತನ ಜನ್ಮದಿನವಾದ ಕ್ರಿಸ್‌ಮಸ್ ಹಬ್ಬದ ಶುಭ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ನಾಡಿನ ಜನತೆಗೆ ಶುಭ ಹಾರೈಸಿದ್ದಾರೆ.

ಪ್ರೀತಿಯ ಕಾರಂಜಿಯಾಗಿ, ಸೋದರತೆಯ ಸಾಗರವಾಗಿ ಹಾಗೂ ಅನುಕಂಪದ ಪರ್ವತವಾಗಿದ್ದ ಏಸುಕ್ರಿಸ್ತ ಕ್ಷಮಾಗುಣದಲ್ಲಿ ಆಗಸದಷ್ಟೇ ಎತ್ತರ ಹಾಗೂ ವಿಶಾಲವಾಗಿದ್ದರು. ಏಸುವಿನ ಬದುಕು ಮನುಕುಲಕ್ಕೆ ಬೆಳಕು ಹಾಗೂ ಮಾರ್ಗದರ್ಶಿ.

ಮಕ್ಕಳಿಗೆ ಉಡುಗೊರೆ ಕೊಡುವ ಸಾಂತಾ ಕ್ಲಾಸ್‌ನ ಅಕ್ಕರೆಯ ನೋಟ, ಸವಿ ರುಚಿಯ ಕೇಕ್‌ಗಳ ಸಂಭ್ರಮ ಹಾಗೂ ವರ್ಣರಂಜಿತ ದೀಪಾಲಂಕಾರ ಎಲ್ಲವೂ ಕ್ರಿಸ್‌ಮಸ್ ಹಬ್ಬ ವಿಶೇಷ.

ಕ್ರಿಸ್‌ಮಸ್ ಹಬ್ಬವು ನಾಡಿನ ಕ್ರೈಸ್ತ ಬಾಂಧವರೆಲ್ಲರಿಗೂ ಒಳಿತನ್ನು ಉಂಟು ಮಾಡಲಿ ಎಂದು ಶ್ರೀ ಸಿದ್ಧರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ

***************